2. ಗಮನ ಸೆಳೆಯುವ ಸೂಚನೆಗಳು:

ವಿಷಯ: ಶಿರಾ ತಾಲ್ಲೂಕಿನಲ್ಲಿರುವ ಸ್ಟೀಲ್ ಕಾರ್ಖಾನೆಗೆ ಗಣಿ ಗುತ್ತಿಗೆ ನೀಡಲು ವಿಳಂಬ ಮಾಡುತ್ತಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕಿನಲ್ಲಿರುವ ಸ್ಟೀಲ್ ಕಾರ್ಖಾನೆಗೆ ಗಣಿ ಗುತ್ತಿಗೆ ನೀಡಲು ವಿಳಂಬ ಮಾಡುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿರುವ ಸ್ಟೀಲ್ ಕಾರ್ಖಾನೆಯಾದ ಮೆ: ಸನ್‌ವಿಕ್ ಸ್ಟೀಲ್ಸ್ ಪ್ರೈ.ಲಿ., ಇವರು ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ವಿವಿಧ ಪ್ರದೇಶಗಳಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡುವಂತೆ ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಪ್ರದೇಶಗಳು ಅಧಿಸೂಚಿತ ಪ್ರದೇಶಗಳಾಗಿದ್ದು, ಅಧಿಸೂಚಿತ ಪ್ರದೇಶಗಳಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ನಿಟ್ಟಿನಲ್ಲಿ ಪರಿಶೀಲಿಸಲು ಸದರಿ ಪ್ರದೇಶದಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡುವಂತೆ ಸ್ವೀಕರಿಸಲ್ಪಟ್ಟಿರುವ ಎಲ್ಲಾ ಅರ್ಜಿದಾರರುಗಳಿಗೂ ಖನಿಜ ರಿಯಾಯಿತಿ ನಿಯಮಾವಳಿಗಳು 1960ರ ನಿಯಮ 26(1)ರ ಪ್ರಕಾರ ಮತ್ತು ಎಂ.ಎಂ.ಡಿ. & ಆರ್ ಕಾಯ್ದೆ 1957ರ ಸೆಕ್ಷನ್ 10ರ ಪ್ರಕಾರ ವಿಚಾರಣೆಯನ್ನು ಏರ್ಪಡಿಸಿ, ರಾಜ್ಯದ ಗಣಿ ನೀತಿ, ಮತ್ತು ಎಂ.ಎಂ.ಡಿ. & ಆರ್ ಕಾಯ್ದೆ 1957 ಮತ್ತು ಖನಿಜ ರಿಯಾಯಿತಿ ನಿಯಮಾವಳಿಗಳು 1960ರ ಪ್ರಕಾರ ಪರಿಶೀಲಿಸಿ ಅರ್ಹ ಅರ್ಜಿದಾರರಿಗೆ ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಗಾಗಿ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ.

ಕೈಗಾರಿಕೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಮೆ: ಸನ್‌ವಿಕ್ ಸ್ಟೀಲ್ಸ್ ಪ್ರೈ.ಲಿ., ಇವರಿಗೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಸಿಂಗೇನಹಳ್ಳಿ ಮತ್ತು ಕೆರೆಹೊಸಹಳ್ಳಿ ಗ್ರಾಮಗಳಲ್ಲಿನ 254.95 ಹೆಕ್ಟೇರ್

ಪ್ರದೇಶದಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ತೀರ್ಮಾನಿಸಲಾಗಿದ್ದಿತು. ಆದರೆ ಸದರಿ ಪ್ರದೇಶದಲ್ಲಿ ಸಂಸ್ಥೆಯು ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಸುತ್ತಾ, ಪರ್ಯಾಯವಾಗಿ ಬೇರೆ ಅಧಿಸೂಚಿತ ಪ್ರದೇಶದಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ಪರಿಗಣಿಸುವಂತೆ ಕೋರಿರುತ್ತದೆ. ಅಧಿಸೂಚಿತ ಪ್ರದೇಶಗಳಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡುವ ಸಮಯದಲ್ಲಿ ಮೆ: ಸನ್‌ವಿಕ್ ಸ್ಟೀಲ್ಸ್ ಪ್ರೈ.ಲಿ., ಇವರು ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿಯನ್ನೂ ಸಹ ಇತರ ಅರ್ಜಿಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೆ, ನಾನು ನೋಡಿದ್ದೇನೆ, ಒಂದು ಏರಿಯಾಕ್ಕೆ ರೆಕಮೆಂಡೇಷನ್ ಮಾಡಿ ಕಳುಹಿಸಿ ಕೊಟ್ಟಿತ್ತು. ಅದು ಸರಿಯಿಲ್ಲ, ಬೇರೆ ಕಡೆ ಮಾಡಿ ಎಂದು ವಿನಂತಿ ಮಾಡಿದ್ದಾರೆ, ಸುಮಾರು 50 ಅರ್ಜಿಗಳು ಇವೆ. ಅದನ್ನು ನೋಡಿ ಬಿಟ್ಟು ಅನುಕೂಲ ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ, ನಿಯಮಾನುಸಾರ ಪರಿಶೀಲಿಸುತ್ತೇವೆಂದು ಹೇಳಿದ್ದೀರಿ, ನಿಯಮವನ್ನು ಅನುಸರಿಸಬೇಕಾಗುತ್ತದೆ. ಆದರೆ ಮುಖ್ಯವಾಗಿ ಇಲ್ಲಿ ಏನೆಂದರೆ, value addition ಎನ್ನತಕ್ಕಂಥದ್ದು ನಿಮ್ಮ ಪಾಲಿಸಿ, ನಿಮ್ಮ ನಿರ್ಧಾರ. ಒಂದು ಸಾರಿ ಅಲ್ಲ, ನೀವು ಹತ್ತು ಸಾರಿ ಹೇಳಿದ್ದೀರಿ. ಹಾಗಾಗಿ ಇದು ಫ್ಯಾಕ್ಟರಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಕೂಡ ಅನೇಕ ಮನವಿಗಳನ್ನು ಸಲ್ಲಿಸಿದಾಗಲೂ ಕೂಡ ಯಾವುದೇ ತೆರವಾದ ಮಂಜೂರಾತಿ ಆಗಿಲ್ಲ. ಎರಡನೆಯದಾಗಿ ಏನಾಗಿದೆ ಎಂದರೆ, ಸುಮಾರು 1000 ಕ್ಕೂ ಹೆಚ್ಚು ಜನ ಕಾರ್ಮಿಕರು ಇವತ್ತು ಅಲ್ಲಿ ಉದ್ಯೋಗದಲ್ಲಿ ತೊಡಗಿದ್ದಾರೆ. ಅದು ಆರ್ಥಿಕವಾಗಿ ಮತ್ತು ಎಲ್ಲಾ ರೀತಿಯಿಂದಲೂ ಮತ್ತು ನಿರುದ್ಯೋಗದ ದೃಷ್ಟಿಯಿಂದಲೂ ಬಹಳಷ್ಟು ಸಹಾಯಕವಾಗಿರುವ ಹಿನ್ನೆಲೆಯಲ್ಲಿ ಒಂದು ವಿಶೇಷತೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ

ತರಬಯಸುತ್ತೇನೆ. ಇದೊಂದು new technology ಏನೆಂದರೆ, ಆ ಸ್ಟೀಲ್ ಫ್ಯಾಕ್ಟರಿಯಿಂದ ಬರತಕ್ಕಂಥ ಆವಿ ಏನಿತ್ತು, ಅದನ್ನು ಕನ್ವರ್ಟ್ ಮಾಡಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಬೇಕೆಂದು ತೀರ್ಮಾನ ಮಾಡಿ ಈಗಾಗಲೇ ತಯಾರು ಮಾಡುತ್ತಿದ್ದಾರೆ. ಈ ರೀತಿ new technology ಇರತಕ್ಕಂಥ ಯಾವ ಫ್ಯಾಕ್ಟರಿಗಳು ನಮ್ಮ ಕರ್ನಾಟಕದಲ್ಲಿ ಇಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ಹಾಗಾಗಿ ಇದಕ್ಕೆ ಆದ್ಯತೆ ಮೇಲೆ ನಿಮ್ಮ ಪಾಲಿಸಿ ಮತ್ತು ನಿಮ್ಮ ತೀರ್ಮಾನ ಅದೇ ಆಗಿರಬೇಕಾದಾಗ ಇದನ್ನು ಕೊಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ. ಈಗ ಏನಾಗಿದೆ ಎಂದರೆ, ಆ ಫ್ಯಾಕ್ಟರಿ ನಿಂತು ಹೋಗಿದೆ. ಏರಿಯಾಗಳು ಇಲ್ಲದಿರುವಾಗ ಫ್ಯಾಕ್ಟರಿಗಳು ನಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. 4 ವರ್ಷದಿಂದ ಪ್ರಯತ್ನ ಪಡುತ್ತಿದ್ದಾರೆ, ಇದುವರೆಗೂ ಮಂಜೂರಾತಿ ಆಗಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ಕೈಗಾರಿಕೆಯ ದೃಷ್ಟಿಯಿಂದ ಮತ್ತು ನಮ್ಮ ಹಿಂದುಳಿದ ತಾಲ್ಲೂಕಿನ ಹಿತದೃಷ್ಟಿಯಿಂದ ಅದನ್ನು ಪರಿಗಣಿಸಬೇಕು. ಪಾಸಿಟಿವ್ ಆಗಿ ರೆಸ್ಪಾನ್ಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಪಾಲಿಸಿಯೂ ಅದೇ ಆಗಿರುವುದರಿಂದ ಇದನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಆ) ವಿಷಯ : ವಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ.

ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ವಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 2009–10ರ ಆಯವ್ಯಯ ಘೋಷಣೆಯಂತೆ ಬಿಜಾಪುರ ಜಿಲ್ಲೆಯನ್ನು ಕನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ (KUIDFC) ರವರು